# ಸಂಸಾರದಲ್ಲಿ ಸಾಧನೆ



※ ಸಂಸಾರಿಗಳ ಕರ್ತವ್ಯವೇನು ಎಂಬುದನ್ನು ಚೈತನ್ಯದೇವ ಹೇಳಿಹೋಗಿದ್ದಾನೆ. ಅದು, ‘ಜೀವಿಗಳಿಗೆ ದಯೆ ತೋರುವುದು, ವೈಷ್ಣವರ ಸೇವೆ ಮಾಡುವುದು, ಭಗವನ್ನಾಮ ಸಂಕೀರ್ತನೆ ಮಾಡುವುದು.’

※ ನೀವು ಸಂಸಾರದಲ್ಲಿದ್ದೀರಿ. ನಿಮಗೆ ಸತ್ಸಂಗ (ಸಾಧುಸಂಗ) ಆವಶ್ಯಕ. ಮೊದಲು ಸಾಧುಸಂಗ, ಬಳಿಕ ಭಗವಂತನಲ್ಲಿ ಶ್ರದ್ಧೆ.

※ ಈ ಸಂಸಾರ ಒಂದು ಮುಳ್ಳುಗಿಡ. ಕೈ ಹಾಕಿತು ಅಂದರೆ ತರಚಿ ರಕ್ತ ಸುರಿಯಲಾರಂಭಿಸುತ್ತದೆ. ಒಂದು ಮುಳ್ಳುಗಿಡ ತೆಗೆದುಕೊಂಡು ಬಂದು ಅದರ ಹತ್ತಿರ ಕುಳಿತುಕೊಂಡು ಜಪಿಸು: ‘ಈ ಗಿಡ ಸುಟ್ಟುಹೋಯಿತು’ ಎಂದು. ಅದಷ್ಟಕ್ಕೆ ಅದು ಸುಟ್ಟುಹೋಗುತ್ತದೆಯೆ? ಜ್ಞಾನಾಗ್ನಿಯನ್ನು ಹೊತ್ತಿಸಿಕೊ. ಆ ಅಗ್ನಿಯಿಂದ ಅದನ್ನು ಸುಡು. ಆಗ ಮಾತ್ರವೇ ಅದು ಸುಟ್ಟು ಬೂದಿಯಾಗುತ್ತದೆ.

※ ಸಾಧನೆಯ ಸಮಯದಲ್ಲಿ ಸ್ವಲ್ಪ ಹೆಚ್ಚು ಶ್ರಮ ತೆಗೆದುಕೊಳ್ಳಬೇಕು. ಆ ಬಳಿಕ ರಾಜರಸ್ತೆ. ನದಿ ಡೊಂಕಾಗಿ ಹರಿಯುವ ಜಾಗದಲ್ಲಿ ಸ್ವಲ್ಪ ಶ್ರಮ ತೆಗೆದುಕೊಂಡು ಮುಂದುವರಿದು, ಬಳಿಕ ಅನುಕೂಲವಾದ ಗಾಳಿ ದೊರೆತಾಗ ದೋಣಿಯನ್ನು ಸುಮ್ಮನೆ ತೇಲಿಬಿಡು.

※ ಎಲ್ಲಿಯವರೆಗೆ ನೀನು ಮಾಯೆಯ ಮನೆಯೊಳಗೆ ಇರುವೆಯೊ, ಎಲ್ಲಿಯವರೆಗೆ ಮಾಯೆಯ ಮೋಡ ಮೇಲೆ ಕವಿದುಕೊಂಡಿರುತ್ತದೆಯೋ, ಅಲ್ಲಿಯವರೆಗೆ ಜ್ಞಾನಸೂರ್ಯನ ಪ್ರಭಾವ ಗೊತ್ತಾಗದು. ಮಾಯೆಯ ಗೃಹವನ್ನು ತ್ಯಜಿಸಿ (ಕಾಮ ಕಾಂಚನ ತ್ಯಜಿಸಿ) ಹೊರಗಡೆ ಬಂದು ನಿಂತುಕೊಂಡರೆ ಆಗ ಜ್ಞಾನಸೂರ್ಯ ಅವಿದ್ಯೆಯನ್ನು ನಾಶ ಮಾಡುತ್ತಾನೆ. ಮನೆಯ ಒಳಗೆ ನಿಂತರೆ ಲೆನ್ಸ್ ಕಾಗದವನ್ನು ಸುಡಲಾರದು. ಮನೆಯಿಂದ ಹೊರಗೆ ಬಂದು ನಿಂತರೆ ಬಿಸಿಲು ಲೆನ್ಸಿನ ಮೇಲೆ ಬೀಳುತ್ತದೆ, — ಆಗ ಕಾಗದ ಸುಟ್ಟುಹೋಗುತ್ತದೆ. ಮತ್ತೆ ಆಕಾಶ ಮೋಡದಿಂದ ಕೂಡಿದ್ದರೆ ಲೆನ್ಸ್ ಕಾಗದವನ್ನು ಸುಡಲಾರದು. ಮೇಘ ಚದುರಿ ಹೋದರೆ ಆಗ ಅದು ಸುಟ್ಟು ಹೋಗುತ್ತದೆ.

※ ಕಾಮಕಾಂಚನದ ಮನೆಯನ್ನು ಬಿಟ್ಟು ಸ್ವಲ್ಪ ಹೊರಗೆ ನಿಂತರೆ — ಹೊರಗೆ ನಿಂತು ಸ್ವಲ್ಪ ಸಾಧನೆ ತಪಸ್ಸುಮಾಡಿದರೆ, ಆಗ ಮನಸ್ಸಿನ ಅಂಧಕಾರ ನಾಶವಾಗುತ್ತದೆ, ಅಹಂಕಾರವೆಂಬ ಅವಿದ್ಯಾ ಮೋಡ ಸುಟ್ಟು ಭಸ್ಮವಾಗುತ್ತದೆ; ಜ್ಞಾನ ಪ್ರಾಪ್ತಿಯಾಗುತ್ತದೆ. ಕಾಮ ಕಾಂಚನವೇ ಆ ಮೋಡ.

※ ತ್ಯಜಿಸಿ ಹೋಗಬೇಕಾದುದರ ಆವಶ್ಯಕತೆ ಏನಿದೆ? ನೀವು ಮಾನಸಿಕವಾಗಿ ತ್ಯಾಗ ಮಾಡಿ. ಸಂಸಾರದಲ್ಲಿ ಅನಾಸಕ್ತರಾಗಿ ಇದ್ದು ಕೊಂಡಿರಿ.

※ ನೀನು ಸಂಸಾರದಲ್ಲೇನೊ ಇದ್ದೀಯೆ, ಇದ್ದರೇನು ಭಯ? ಆದರೆ ಮಾತ್ರ ಇಡಿಯ ಕರ್ಮಫಲವನ್ನು ಭಗವಂತನಿಗೆ ಅರ್ಪಿಸಿ ಬಿಡಬೇಕು. ನೀನು ಮಾತ್ರ ಯಾವ ಫಲವನ್ನೂ ಅಪೇಕ್ಷಿಸಕೂಡದು. ಆದರೆ ಒಂದು ವಿಷಯ, ಭಕ್ತಿಕಾಮನೆ ಕಾಮನೆಗಳ ಗುಂಪಿಗೆ ಸೇರಿದುದಲ್ಲ. ಭಕ್ತಿಕಾಮನೆಯನ್ನು, ಭಕ್ತಿ ಪ್ರಾರ್ಥನೆಯನ್ನು ಮಾಡಬಹುದು. ಭಕ್ತಿಯ ತಾಮಸಿಕ ಭಾಗವನ್ನು ಉಪಯೋಗಿಸು. ಭಗವತಿಯನ್ನು ಬಲಾತ್ಕರಿಸಿ ಕೇಳು.

※ ಭಕ್ತ : ‘‘ಮಹಾಶಯರೆ, ಸಂಸಾರವನ್ನು ನಾವು ತ್ಯಜಿಸಿ ಬಿಡಬೇಕೇನು?’’

ಶ್ರೀರಾಮಕೃಷ್ಣರು: ‘‘ಇಲ್ಲ, ಬೇಕಾಗಿಲ್ಲ. ನೀವೇಕೆ ತ್ಯಜಿಸಲು ಹೋಗಬೇಕು? ಸಂಸಾರದಲ್ಲಿ ಇದ್ದರೂ ಆತ ದೊರೆಯಬಹುದು. ಆದರೆ ಮೊದಲು ಕೆಲವು ಕಾಲ ನಿರ್ಜನಪ್ರದೇಶದಲ್ಲಿ ಇರಬೇಕು, ನಿರ್ಜನಪ್ರದೇಶದಲ್ಲಿದ್ದು ಸಾಧನೆ ಮಾಡಬೇಕು. ಮನೆಯ ಹತ್ತಿರ ಅಂತಹ ಒಂದು ಸ್ಥಳವನ್ನು ಮಾಡಿಕೊಳ್ಳಬೇಕು. ಅಲ್ಲಿಂದ ಬಂದು ಊಟಮಾಡಿ ಮತ್ತೆ ಹಿಂದಿರುಗಿ ಅಲ್ಲಿಗೆ ಹೋಗುವಂತಿರಬೇಕು.

※ ಆತನ ಸಾಕ್ಷಾತ್ಕಾರ ಪಡೆದ ವ್ಯಕ್ತಿ ಸಂಸಾರದಲ್ಲಿ ಬಂದು ಇದ್ದರೂ ಕಾಮಕಾಂಚನ ಆತನಿಗೆ ಏನನ್ನೂ ಮಾಡಲಾರವು. ಆಗ ಆತ ಜನಕರಾಜನಂತೆ ನಿರ್ಲಿಪ್ತನಾಗಿ ಇರಬಲ್ಲ. ಆದರೆ ಪ್ರಥಮದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕು, ಅತ್ಯಂತ ನಿರ್ಜನ ಪ್ರದೇಶದಲ್ಲಿ ಇದ್ದು ಸಾಧನೆಮಾಡಬೇಕು. ಅಶ್ವತ್ಥವೃಕ್ಷ ಇನ್ನೂ ಸಸಿಯಾಗಿರುವಾಗ ಆಡು ದನಕರುಗಳು ಅದನ್ನು ತಿಂದು ನಾಶ ಮಾಡದೆ ಇರಲಿ ಎಂದು ಅದರ ಸುತ್ತಲೂ ಬೇಲಿ ಹಾಕುತ್ತಾರೆ. ಆದರೆ ಬುಡ ದಪ್ಪವಾಯಿತೆಂದರೆ ಬೇಲಿಯ ಅವಶ್ಯಕತೆಯೇನಿರದು. ಆಗ ತೆಗೆದುಕೊಂಡು ಹೋಗಿ ಆನೆಯನ್ನು ಕಟ್ಟಿದರೂ ಅದಕ್ಕೆ ಏನೂ ಆಗದು. ನಿರ್ಜನಪ್ರದೇಶದಲ್ಲಿ ಸಾಧನೆ ಮಾಡಿ ಭಗವಂತನ ಪಾದಪದ್ಮಗಳನ್ನು ಭಕ್ತಿಯಿಂದ ಪೂಜಿಸಿ ಶಕ್ತಿಯನ್ನು ವೃದ್ಧಿಮಾಡಿಕೊಂಡು ಮನೆಗೆ ಹೋಗಿ ಸಂಸಾರದಲ್ಲಿ ಇದ್ದರೆ ಕಾಮ-ಕಾಂಚನ ನಿನ್ನನ್ನು ಏನೂ ಮಾಡಲಾರವು.

‘ಶ್ರೀರಾಮಕೃಷ್ಣ ವಚನವೇದ’ದಿಂದ